ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :-

ಅ) ಕರ್ನಾಟಕ ಭವನ 1 ಮತ್ತು II

	ಸಿಬ್ಬಂದಿ ಖರ್ಚು	ನಿರ್ವಹಣೆಗಾಗಿ ಖರ್ಚು
	ರೂ. ಲಕ್ಷದಲ್ಲಿ	ರೂ. ಲಕ್ಷದಲ್ಲಿ
1987–88	16.86	17.10
1988–89	17.00	25.50
1989–90	20.50	39.03
ಒಟ್ಟು :	54.36	81.63

ಆ) ಕನ್ನಡಿಗರು — 37
ಕನ್ನಡೇತರರು — 53

ವಿಷಯ :- ಮೈಸೂರು ದಸರಾ ಉತ್ಸವಕ್ಕೆ ಖರ್ಚಾದ ಹಣ.
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 516 (832)

ಶ್ರೀ ಎಲ್. ಆರ್. ಶಿವರಾಮೇಗೌಡ (ನಾಗಮಂಗಲ) :- ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ದಸರಾ ಉತ್ಸವಕ್ಕಾಗಿ 15 ನೇ ಅಕ್ಟೋಬರ್ 1990 ರ ವರೆಗೆ ಖರ್ಚು ಮಾಡಿದ ಹಣವೆಷ್ಟು ?

ಆ) ಮೇಲ್ಕಂಡ ತಾರೀಖಿನವರೆಗೆ ಬಂದಿರುವ ಆದಾಯದ ಮೊತ್ತವೆಷ್ಟು ?

ಇ) ದಸರಾ ಮೆರವಣಿಗೆಗಳಲ್ಲಿ ವಸ್ತು ಪ್ರದರ್ಶನಗಳಲ್ಲಿ ಭಾಗವಹಿಸಲು ನಿರ್ಧರಿಸಿದ ಕೇಂದ್ರ ಸರ್ಕಾರದ ಇಲಾಖೆಗಳ ಕೇಂದ್ರೊದ್ದಿಮೆಗಳ ವಿವರಗಳೇನು ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :-

ಅ) ದಸರಾ ಉತ್ಸವಕ್ಕೆ ರೂ. 35.06 ಲಕ್ಷಗಳು.

ಆ) ದಸರಾ ಉತ್ಸವದಿಂದ ಸರ್ಕಾರಕ್ಕೆ ಯಾವುದೇ ಆದಾಯ ಇರುವುದಿಲ್ಲ.

ಇ) 1) ದಸರಾ ಮೆರವಣಿಗೆಯಲ್ಲಿ ಭಾಗವಹಿಸಿದ್ದವುಗಳು.

1) ಕೇಂದ್ರ ರಕ್ಷಣಾ ಇಲಾಖೆ
2) ಕೇಂದ್ರ ರಕ್ಷಣಾ ಸೇನೆ.
3) ನೌಕಾದಳ.
4) ವಾಯುದಳ.
5) ಬಿ. ಇ. ಎಲ್.
6) ರೈಲ್ವೆ ರಕ್ಷಣಾ ದಳ.

2) ವಸ್ತು ಪ್ರದರ್ಶನದಲ್ಲಿ ಭಾಗವಹಿಸಿದ್ದವರು.

1) ದಕ್ಷಿಣ ರೈಲ್ವೆ ಮಳಿಗೆ.
2) ಬಾಹ್ಯಾಕಾಶ ಸಂಶೋಧನಾ ಕೇಂದ್ರ. ಹಾಸನ.
3) ತೆಂಗು ಅಭಿವೃದ್ಧಿ ಮಂಡಳಿ.
4) ಹೆಚ್. ಎಂ. ಟಿ.
5) ಜಂಟಿ ಪ್ರಚಾರ ಸಮಿತಿ. ಸಾರ್ವಜನಿಕ ಉದ್ದಿಮೆಗಳು.